# Karnatak University, Dharwad

"University with Potential for Excellence" NAAC Accredited with "A" Grade-2022

&

Kousali Institute of Management Studies

## <u>Memorandum of Understanding</u>

With

# The textile Association(India)

# MP Unit-Indore







ಹೊಸ ದಿಗಂತ 2 16 Nov 2022

# ಕೌಶಲ್ಯ ಆಧಾರಿತ ಕಲಿಕೆಗೆ ಆದ್ಯತೆ

**ಧಾರವಾಡ:** ವಿದ್ಯಾರ್ಥಿಗಳಿಗೆ ಕೌಶಲ್ಯ ಆಧಾರಿತ ಕಲಿಕೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಉದ್ಯಮ ಮತ್ತು ಶೈಕ್ಷಣಿಕ ಸಂಸ್ಥೆಗಳ ಮಧ್ಯ ಅಂತರ ಕಡಿಮೆ ಮಾಡುವಲ್ಲಿ ಔದ್ಯಮಿಕ ಒಡಂಬಡಿಕೆ ಹೆಚ್ಚು ಅನುಕೂಲ ಎಂದು ಕವಿವಿ ಕುಲಸಚಿವ ಯಶಪಾಲ ಕ್ಷೀರಸಾಗರ ಹೇಳಿದರು.

ಮಧ್ಯಪ್ರದೇಶದ ಇಂದೋರಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕೌಶಾಲಿ ನಿರ್ವಹಣಾ ಅಧ್ಯಯನ ವಿಭಾಗ(ಕಿಮ್ಸ್) ಮಧ್ಯಪ್ರದೇಶದ ದಿ ಟೆಕ್ಸ್‌ಟೈಲ್ ಆಫ್ ಇಂಡಿಯಾದ ಘಟಕದ(ಟೈ) ಮಧ್ಯ ಏರ್ಪಡಿಸಲಾದ ಒಡಂಬಡಿಕೆಯ ಪತ್ರಕ್ಕೆ ಸಹಿ ಹಾಕಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಉದ್ಯಮಗಳ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಇಂತಹ ಒಡಂಬಡಿಕೆ ಹೆಚ್ಚು ಉಪಯುಕ್ತವಾಗಲಿವೆ. ಮುಂಬರುವ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಇತರಹದ ಒಪ್ಪಂದಗಳು ಅವರ ಶೈಕ್ಷಣಿಕ ಭವಿಷ್ಯಕ್ಕೆ ಪೂರಕವಾಗಲಿದೆ ಎಂದು ಯಶಪಾಲ್ ಅಭಿಪ್ರಾಯಪಟ್ಟರು.

ಜವಳಿ ಉದ್ಯಮ ಮಂಡಳಿಯ ಘಟಕದ ಕಾರ್ಯದರ್ಶಿ ಪಿ.ಎನ್.ಮಿಶ್ರಾ, ಒಪ್ಪಂದದ ಅನ್ವಯ ಶೈಕ್ಷಣಿಕ ಸಂಸ್ಥೆಗಳು, ಉದ್ಯಮಗಳ ನಡುವೆ ಅಂತರ ಕಡಿತ, ವಿದ್ಯಾರ್ಥಿಗಳಿಗೆ ಪ್ರಾಯೋಗಿಕ, ಕೌಶಲ್ಯ ಆಧಾರಿತ ಕಲಿಕೆಗೆ ಹೆಚ್ಚು ಒತ್ತು ನೀಡುವದು ಸಹಕಾರಿಯಾಗಿದೆ ಎಂದರು.

ಈ ವೇಳೆ ಭಾರತೀಯ ಜವಳಿ ಮಂಡಳಿಯ ಅಧ್ಯಕ್ಷ ಆರ್.ಕೆ.ವಿಜ್ ಹಾಗೂ ಕವಿವಿ ಕುಲಸಚಿವ ಯಶಪಾಲ್ ಕ್ಷೀರಸಾಗರ ಒಡಂಬಡಿಕೆಯ ಪತ್ರಕ್ಕೆ ಸಹಿ ಹಾಕಿದರು.

ಕೇಂದ್ರ ಜವಳಿ ಉದ್ಯಮ ಮಂಡಳಿಯ ಗೌರವ ಕಾರ್ಯದರ್ಶಿ ಮಹೇಂದ್ರ ಪಟೇಲ್, ಕೇಂದ್ರ ಜವಳಿ ಮಂಡಳಿಯ ಉಪಾಧ್ಯಕ್ಷ ಟಿ.ಎಲ್.ಪಟೇಲ್, ಕೌಶಾಳಿ ನಿರ್ವಹಣಾ ಅಧ್ಯಯನ ಸಂಸ್ಥೆಯ ನಿರ್ದೇಶಕ ಡಾ.ಎ.ಎಂ.ಕಡಕೋಳ, ಸಹಾಯಕ ಪ್ರಾಧ್ಯಾಪಕಿ ಡಾ.ಪುಷ್ಪಾ ಹೊಂಗಲ್ ಇದ್ದರು.



# ಔದ್ಯಮಿಕ ಒಡಂಬಡಿಕೆಗೆ ಕವಿವಿ ಹಸಿರು ನಿಶಾನೆ

ಧಾರವಾಡ: ವಿದ್ಯಾರ್ಥಿಗಳಿಗೆ ಕೌಶಲ್ಯಾಧಾರಿತ ಕಲಿಕೆಗೆ ಹೆಚ್ಚು ಒತ್ತು ನೀಡುವುದು ಮತ್ತು ಉದ್ಯಮ ಹಾಗೂ ಶೈಕ್ಷಣಿಕ ಸಂಸ್ಥೆಗಳ ಮಧ್ಯೆ ಅಂತರ ಕಡಿಮೆ ಮಾಡುವಲ್ಲಿ ಔದ್ಯಮಿಕ ಒಡಂಬಡಿಕೆಗಳು ಹೆಚ್ಚು ಅನುಕೂಲವಾಗಲಿವೆ ಎಂದು ಕವಿವಿ ಕುಲಸಚಿವ ಯಶಪಾಲ ಕ್ಷೀರಸಾಗರ ಹೇಳಿದರು.

ಮಧ್ಯಪ್ರದೇಶದ ಇಂದೂರನಲ್ಲಿ ಕವಿವಿಯ ಕೌಶಾಳಿ ನಿರ್ವಹಣಾ ಅಧ್ಯಯನ ವಿಭಾಗ ಮತ್ತು ಮಧ್ಯಪ್ರದೇಶದ ದಿ ಟೆಕ್ಸ್‌ಟೈಲ್ ಆಫ್ ಇಂಡಿಯಾ ಘಟಕದ ಮಧ್ಯೆ ಔದ್ಯಮಿಕ ಒಡಂಬಡಿಕೆಗಳಿಗೆ ಸಹಿ ಹಾಕಿ ಮಾತನಾಡಿ, ವಿದ್ಯಾರ್ಥಿಗಳಿಗೆ ಉದ್ಯಮಗಳ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಇಂತಹ ಒಡಂಬಡಿಕೆಗಳು ಹೆಚ್ಚು ಉಪಯುಕ್ತವಾಗಲಿವೆ. ಮುಂಬರುವ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಈ ರೀತಿಯ ಒಪ್ಪಂದಗಳು ಅವರ ಶೈಕ್ಷಣಿಕ ಭವಿಷ್ಯಕ್ಕೆ ಪೂರಕವಾಗಲಿವೆ ಎಂದರು.

ಭಾರತೀಯ ಜವಳಿ ಉದ್ಯಮ ಮಂಡಳಿಯ ಘಟಕದ ಕಾರ್ಯದರ್ಶಿ ಪಿ.ಎನ್. ಮಿಶ್ರಾ ಮಾತನಾಡಿ, ಈ ಒಪ್ಪಂದದ ಅನ್ವಯ ಶೈಕ್ಷಣಿಕ ಸಂಸ್ಥೆಗಳು ಮತ್ತು ಉದ್ಯಮಗಳ ನಡುವೆ ಅಂತರ ಕಡಿಮೆ ಮಾಡುವುದು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ, ಕೌಶಲ್ಯ ಆಧಾರಿತ ಕಲಿಕೆಗೆ ಹೆಚ್ಚು ಒತ್ತು ನೀಡುವುದು ಈ ಒಪ್ಪಂದದಿಂದ ಸಹಾಯಕವಾಗಲಿದೆ. ಜವಳಿ ಉದ್ಯಮಕ್ಕೆ ಆಣಿಯಾಗುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಹೊಸ ತಂತ್ರಜ್ಞಾನ ಆಧಾರಿತ ತರಬೇತಿಯನ್ನು ನೀಡುವ ದೃಷ್ಟಿಯಿಂದ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದರು.

ಭಾರತೀಯ ಜವಳಿ ಮಂಡಳಿಯ ಅಧ್ಯಕ್ಷ ಆರ್.ಕೆ. ವಿಜ್ ಮತ್ತು ಕವಿವಿ ಕುಲಸಚಿವ ಯಶಪಾಲ್ ಕ್ಷೀರಸಾಗರ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದರು. ಮಹೇಂದ್ರ ಪಟೇಲ್, ಟಿ.ಎಲ್. ಪಟೇಲ್, ಡಾ. ಎ.ಎಂ. ಕಡಕೋಳ, ಡಾ. ಪುಷ್ಪಾ ಹೊಂಗಲ್ ಇದ್ದರು.

ಕವಿವಿ ಕೌಶಾಳಿ ನಿರ್ವಹಣಾ ಅಧ್ಯಯನ ವಿಭಾಗ ಮಧ್ಯ ಪ್ರದೇಶದ ದಿ ಟೆಕ್ಸ್‌ಟೈಲ್ ಆಫ್ ಇಂಡಿಯಾ ಮಧ್ಯೆ ಒಡಂಬಡಿಕೆಗೆ ಸಹಿ ಮಾಡಿದ ಸಂದರ್ಭ...



# Textile Association signs MoU with Karnataka University

OUR STAFF REPORTER
city.indore@fpj.co.in

To provide skill-based learning to the students, The Textile Association (India) MP unit signed a memorandum of understanding (MoU) with Karnataka University, Dharwad on Thursday.

The MoU focuses on providing students with the field experience of the industries and bridging the gap between qualitative learning and the skills required in the field. This collaboration aims to enhance their practical knowledge.

"The Textile Association focuses on training people so that they become an asset for the industry. The association has decided to join hands with the Karnataka University, Dharwad and the students can visit, attend seminars and get hands-on experience. We have decided to train the students and equip them with the technical skills that the world of industry needs." said PN Mishra, trustee, Textile Association (India) MP Unit.

Pushpa Hongal, assistant professor at Karnataka University, Dharwad, informed Free Press that the institute aims to bridge the gap between what the students learn and the market requirement. She said, "Such MoUs are the need of the hour. It will open a door of learning for the students, and the experts here will ready them for the real world."

To provide skill based learning to students, the Karnatak University, Dharwad signed an MoU with The Textile Association (India)MP on 10-11-2022. This MoU will focus on training students so that they become assets for an industry. The students will be trained and equip them with the technical skills that the world of industry needs. This MoU will further bridge the gap between what the students learn and the market requirements. This MoU will open doors of learning for the students.